<u>ಸಾಕ್ಷಿಯನ್ನು ದಿನಾಂಕ **24-01-2023** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಹೆಚ್ ಎನ್ ಕೆ ವಕೀಲರಿಂದ ವಾದಿಯ ಪರವಾಗಿ</u> ಃ(ಸಾಕ್ಷಿಯು ಸಾಕ್ಷಿಯ ಕಟಕಟೆಯಲ್ಲಿ ಹಾಜರಾಗಿ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿ ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಸತ್ಯಾಪನೆ ಮಾಡಿರುತ್ತಾರೆ)

ನಮ್ಮ ಕುಟುಂಬದ ವಂಶವೃಕ್ಷದ ಪ್ರಮಾಣಪತ್ರದ ಪ್ರತಿಯನ್ನು ನಿಪಿ-1 ಎಂದು, ಆರು ಖಾಸ್ರಾ ಪಹಣಿಯ ಪತ್ರಿಕೆಗಳ ಪ್ರತಿಗಳನ್ನು ನಿಪಿ-2 ರಿಂದ ನಿಪಿ-7 ಎಂದು, ಒಂಭತ್ತು ಕೈಬರಹದ ಪಹಣಿ ಪತ್ರಿಕೆಗಳನ್ನು ನಿಪಿ-8 ರಿಂದ ನಿಪಿ-16 ಎಂದು, ಗಣಕೀಕೃತ ಪಹಣಿ ಪತ್ರಿಕೆಗಳನ್ನು ನಿಪಿ-17 ರಿಂದ ನಿಪಿ-42 ಎಂದು, ನಾಲ್ಕು ಎಂ ಆರ್ ನ ಪ್ರತಿಗಳನ್ನು ನಿಪಿ-43 ರಿಂದ ನಿಪಿ-46 ಎಂದು, ವರ್ಗ ಮುಬಾದಿಲ್ ರಿಜಿಸ್ಟರ್ ಸಂಖ್ಯೆಃ 25 ರ ದೃಡೀಕೃತ ಪ್ರತಿಯನ್ನು ನಿಪಿ-47 ಎಂದು, ಗ್ರಾಮ ಪಂಚಾಯತಿ ಡಣಾಪುರ ಇವರು ನೀಡಿದ 3 ಖಾತೆಯ ವರ್ಗಾವಣೆಯ ಆದೇಶದ ದೃಡೀಕೃತ ಪ್ರತಿಗಳನ್ನು ನಿಪಿ-48 ರಿಂದ ನಿಪಿ-50 ಎಂದು, ಮನೆಯ ಆಸ್ತಿಯ ಎರಡು ತೆರಿಗೆ ಬೇಡಿಕೆ ರಿಜಿಸ್ಟರಿನ ಪ್ರತಿಗಳನ್ನು ನಿಪಿ-51 & ನಿಪಿ-2 ಎಂದು ಗುರುತಿಸಲಾಯಿತು.

<u>**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.